**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**ಸಿ.ಮಿಸ್.280/2021**

| | | |
|---|---|---|
| ಸಾಕ್ಷಿಯ ಹೆಸರುಃ | ಯಶೋಧ | PW-1 |
| ಗಂಡನ ಹೆಸರುಃ | ತ್ರಿನೇಶ | |
| ವಯಸ್ಸುಃ | 50 ವರ್ಷ | ಪ್ರಮಾಣೀಕರಿಸಿದ ದಿಃ 26/06/2024 |
| ಉದ್ಯೋಗಃ | ಏನೂ ಇಲ್ಲ | |
| ವಾಸಸ್ಥಳಃ | ಶಾನುಭೋಗನಹಳ್ಳಿ ಗ್ರಾಮ, ಪಿರಿಯಾಪಟ್ಟಣ ತಾಲ್ಲೂಕು | |

**ಮುಖ್ಯ ವಿಚಾರಣೆಃ** ಅರ್ಜಿದಾರರ ಪರ ವಕೀಲ**ರಿಂದಃ**

ದಿಃ29/04/1991ರಲ್ಲಿ ನನ್ನ ಮದುವೆ ಎದುರುದಾರರೊಂದಿಗೆ ಗುರುಹಿರಿಯರ ಮುಂದೆ ಶಾನುಭೋಗನಹಳ್ಳಿಯಲ್ಲಿ ನಡೆಯಿತು. ನನ್ನ ಮದುವೆಯ ಕಾಲಕ್ಕೆ ಎದುರುದಾರರಿಗೆ 60 ಗ್ರಾಂ ಚಿನ್ನ ಮತ್ತು ಒಂದು ಲಕ್ಷ ರೂಪಾಯಿ ನಗದು ಹಣವನ್ನು ವರದಕ್ಷಿಣೆಯಾಗಿ ಕೊಟ್ಟಿದ್ದೆವು. ನಾವು ಮದುವೆಯಾದ ನಂತರ 4-5 ವರ್ಷ ಅನ್ಯೋನ್ಯವಾಗಿದ್ದೆವು. ಆ ಸಮಯದಲ್ಲಿ ನನಗೆ ಇಬ್ಬರು ಮಕ್ಕಳು ಜನಿಸಿದರು. ನಂತರ ನನಗೆ ಹೊಡೆದು ಬಡಿದು ಮಾಡಿ, ಅನ್ಯ ಸ್ತ್ರೀಯೊಂದಿಗೆ ಸಂಬಂಧ ಇಟ್ಟುಕೊಂಡು ಮನೆಯಿಂದ ಓಡಿಸಿದರು. ಎದುರುದಾರರು ಇಸ್ಪೀಟ್ ಆಡುವ ದುರಭ್ಯಾಸ ಇಟ್ಟುಕೊಂಡಿದ್ದಾರೆ. ಎದುರುದಾರರು ನನಗೆ ಕೊಟ್ಟ ಕಿರುಕುಳದ ಬಗ್ಗೆ ನಾನು ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿದ್ದೆ, ಆದರೆ ಅವರು ಅದನ್ನು ಸ್ವೀಕರಿಸಲಿಲ್ಲ. ನನ್ನ ಗಂಡ ನನ್ನನ್ನು ಮತ್ತು ನನ್ನ ಮಕ್ಕಳನ್ನು ಹೊರಗೆ ಹಾಕಿ ಸುಮಾರು 20 ವರ್ಷ ಕಳೆದಿದೆ. ನನ್ನ ಮಗಳು ಬಿಂದುವನ್ನು ನನ್ನ ಗಂಡ 3-4 ಬಾರಿ ಶಾಲೆಯ ಬಳಿ ಹೋಗಿ ಹೊಡೆದು

ಹಿಂಸಿಸಿದ್ದರು. ಬಿಂದುವಿಗೆ ನೀನು ವಿಧವೆಯಾಗುತ್ತೀಯಾ, ನಿನಗೆ ಕಂಕಣ ಭಾಗ್ಯ ಇಲ್ಲ ಎಂದು ಬೈದು ನೀನು ಇರುವುದಕ್ಕಿಂತ ಸಾಯುವುದೇ ಮೇಲು ಎಂದು ಹೇಳಿದ್ದರು. ಆದ್ದರಿಂದ ಬಿಂದು ಕಾಗದ ಬರೆದು ಸತ್ತುಹೋದರು. ನಾನು ನನ್ನ ತಂದೆಯ ಊರಿನಲ್ಲಿ ಬಾಡಿಗೆ ಮನೆ ಮಾಡಿಕೊಂಡು ವಾಸಿಸುತ್ತಿದ್ದೇನೆ. ತಿಂಗಳಿಗೆ ನಾನು ರೂ.2,500/- ಬಾಡಿಗೆ ಕಟ್ಟುತ್ತೇನೆ. ನನಗೆ ದುಡಿಯುವ ಶಕ್ತಿ ಇಲ್ಲ. ನನಗೆ ಕೆಲಸ ಮಾಡಲು ಆಗುವುದಿಲ್ಲ. ಎದುರುದಾರರು ನನಗೆ ಹೊಡೆದಿದ್ದು, ಅದು ಈಗ ನನ್ನ ಮೂಳೆ ನೋವಾಗುತ್ತಿದೆ. ನನಗೆ ತಿಂಗಳಿಗೆ 15 ರಿಂದ 20 ಸಾವಿರ ರೂಪಾಯಿ ವೈದ್ಯಕೀಯ ವೆಚ್ಚ ಬೇಕಾಗುತ್ತದೆ.

2. ಎದುರುದಾರರಿಗೆ ಐದೂವರೆ ಎಕರೆ ಜಮೀನು, ಎರಡು ಬ್ಯಾರೇನ್ ಮನೆ, ಎರಡು ವಾಸದ ಮನೆಗಳು ಇವೆ. ಎದುರುದಾರರು ಹೊಗೆಸೊಪ್ಪು ಮತ್ತು ಶುಂಠಿಯನ್ನು ಬೆಳೆಯುತ್ತಾರೆ. ಅವರಿಗೆ ವಾರ್ಷಿಕ ಸುಮಾರು 7-8 ಲಕ್ಷ ರೂಪಾಯಿ ವರಮಾನ ಇದೆ. ನನಗೆ ತಿಂಗಳಿಗೆ ರೂ.20,000/-ಜೀವನಾಂಶ ಕೊಡಿಸಬೇಕೆಂದು ಪ್ರಾರ್ಥಿಸುತ್ತೇನೆ. ನಾನು ಎದುರುದಾರರು ಕೊಟ್ಟ ಕಿರುಕುಳ ಮತ್ತು ಪರ ಸ್ತ್ರೀಸಂಗದ ಬಗ್ಗೆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿಲ್ಲ.

(ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಸಮಯ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಪಿರಿಯಾಪಟ್ಟಣ.